**ಕರ್ನಾಟಕ ವಿಧಾನ ಪರಿಷತ್ತು**

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 535 |
| ಮಾನ್ಯ ಸದಸ್ಯರ ಹೆಸರು | ಡಾ: ಚಂದ್ರಶೇಖರ ಬ. ಪಾಟೀಲ್ (ಪದವೀಧರರ ಕ್ಷೇತ್ರ) |
| ಉತ್ತರಿಸುವ ಸಚಿವರು | ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | 20-02-2023 |

| | **ಪ್ರಶ್ನೆ** | **ಉತ್ತರ** |
|---|---|---|
| (ಅ) | ಪದವಿ ಮುಗಿಸಿದ ವಿದ್ಯಾರ್ಥಿಗಳಿಗೆ ಅಂಕ ಪಟ್ಟಿ ಜೊತೆಗೆ ಕಾನ್ವೋಕೇಷನ್ ಸರ್ಟಿಫಿಕೇಟ್ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅಂಕಪಟ್ಟಿ ಜೊತೆಗೆ ಕಾನ್ವೋಕೇಷನ್ ಸರ್ಟಿಫಿಕೇಟ್ ನೀಡಲು ವಿಶ್ವವಿದ್ಯಾಲಯಗಳಿಗೆ ಇರುವ ತೊಂದರೆ ಏನು: 15 ವರ್ಷಗಳ ಹಿಂದಿನ ಬಹಳಷ್ಟು ವಿದ್ಯಾರ್ಥಿಗಳು ಇಲ್ಲಿಯವರೆಗೆ ಕಾನ್ವೋಕೇಷನ್ ಸರ್ಟಿಫಿಕೇಟ್ ಪಡೆಯದೇ ಇರುವುದರಿಂದ ಅವರಿಗೆ ಸದರಿ ಸರ್ಟಿಫಿಕೇಟ್ ನೀಡಲು ಸರ್ಕಾರ ಕೈಗೊಂಡ ಕ್ರಮವೇನು? | ಪದವಿ ಮುಗಿಸಿದ ವಿದ್ಯಾರ್ಥಿಗಳಿಗೆ ಅಂಕಪಟ್ಟಿಗಳೊಂದಿಗೆ ಕಾನ್ವೋಕೇಷನ್ ಸರ್ಟಿಫಿಕೇಟ್ ಅನ್ನು ನೀಡಲಾಗುತ್ತಿಲ್ಲ. ಘಟಿಕೋತ್ಸವ ಆಗದೇ ಕಾನ್ವೋಕೇಷನ್ ಸರ್ಟಿಫಿಕೇಟ್ ಅನ್ನು ನೀಡಲಾಗುವುದಿಲ್ಲ. ಫಲಿತಾಂಶ ಪ್ರಕಟವಾದ ಮೇಲೆ ಅಂಕಪಟ್ಟಿ ತೆಗೆದುಕೊಂಡಾಗ ಅಥವಾ ನಂತರ ತಾತ್ಕಾಲಿಕವಾಗಿ Provisional Convocation or Degree Certificate ಅನ್ನು ಕೊಡಲಾಗುತ್ತಿದೆ. ಫಲಿತಾಂಶ ಪ್ರಕಟವಾದ ನಂತರ ಕಾನ್ವೋಕೇಷನ್ ಅಥವಾ ಪದವಿ ಸರ್ಟಿಫಿಕೇಟ್ ಪಡೆಯಲು ಘಟಿಕೋತ್ಸವದಲ್ಲಿ ಅರ್ಜಿ ಸಲ್ಲಿಸಬೇಕಾಗಿದ್ದು, ಕೆಲವು ವಿದ್ಯಾರ್ಥಿಗಳು ವರ್ಷಗಳಾದರು ಅರ್ಜಿ ಸಲ್ಲಿಸುವುದಿಲ್ಲ. ಹಾಗಾಗಿ, ಅಂತಹ ವಿದ್ಯಾರ್ಥಿಗಳು ಕಾನ್ವೋಕೇಷನ್ ಅಥವಾ ಪದವಿ ಸರ್ಟಿಫಿಕೇಟ್ ಪಡೆದಿರುವುದಿಲ್ಲ.<br><br>ಹಾಗಾಗಿ, ಇತ್ತೀಚೆಗೆ ಹಲವು ವಿಶ್ವವಿದ್ಯಾಲಯಗಳು ಅಂತಿಮ ವರ್ಷದ ಅಂತಿಮ ಸೆಮಿಸ್ಟರ್ ಪರೀಕ್ಷೆ ಶುಲ್ಕ ತೆಗೆದುಕೊಳ್ಳುವಾಗಲೇ ಕಾನ್ವೋಕೇಷನ್ ಅಥವಾ ಪದವಿ ಸರ್ಟಿಫಿಕೇಟ್ ನೀಡಲು ಅರ್ಜಿ ತೆಗೆದುಕೊಂಡು ಮುಂದಿನ ಕಾನ್ವೋಕೇಷನ್‌ನಲ್ಲಿಯೇ ಅನುಮೋದನೆ ಪಡೆದು ನಂತರದ ದಿನಗಳಲ್ಲಿ ಕಾನ್ವೋಕೇಷನ್ ಅಥವಾ ಪದವಿ ಸರ್ಟಿಫಿಕೇಟ್ ನೀಡುತ್ತಿವೆ.<br><br>ಮುಂದುವರೆದು, ಯುಜಿಸಿ ಮಾರ್ಗಸೂಚಿಗಳ ಪ್ರಕಾರ ವಿಶ್ವವಿದ್ಯಾಲಯಗಳು, ಪರೀಕ್ಷೆಗಳು ಪೂರ್ಣಗೊಂಡ ನಂತರ ಆರು ತಿಂಗಳೊಳಗಾಗಿ ಘಟಿಕೋತ್ಸವ ಸಮಾರಂಭಗಳನ್ನು ನಡೆಸಿ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣಪತ್ರಗಳನ್ನು ವಿತರಿಸಬೇಕಾಗುತ್ತದೆ. ಅದರಂತೆ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು ಕ್ರಮವಹಿಸುತ್ತಿವೆ. ಇದರ ಮಧ್ಯೆ ವಿದ್ಯಾರ್ಥಿಗಳಿಗೆ ಅಗತ್ಯವಿದ್ದರೆ, ತಾತ್ಕಾಲಿಕ ಪದವಿ ಪ್ರಮಾಣಪತ್ರಗಳನ್ನು (Provisional Degree Certificate) ನೀಡಲು ಅವಕಾಶವಿದೆ. ಅಲ್ಲದೇ, ವಿಶ್ವವಿದ್ಯಾಲಯಗಳಲ್ಲಿ, ವಾರ್ಷಿಕ ಘಟಿಕೋತ್ಸವಗಳ ಮಧ್ಯೆ ಎರಡನೆಯ ಅಥವಾ ಕಿರು ಘಟಿಕೋತ್ಸವ (Mini Convocation) ನಡೆಸಿ ಪ್ರಮಾಣಪತ್ರಗಳನ್ನು ವಿತರಿಸುವ ವ್ಯವಸ್ಥೆಯೂ ಇರುತ್ತದೆ.<br><br>ಒಂದು ವೇಳೆ ಹಳೆಯ ವಿದ್ಯಾರ್ಥಿಗಳು ಇದುವರೆಗೆ ಪದವಿ ಪ್ರಮಾಣ ಪತ್ರ ಪಡೆಯದಿದ್ದರೆ, ವಿಶ್ವವಿದ್ಯಾಲಯಗಳಿಗೆ ಅರ್ಜಿ ಸಲ್ಲಿಸಿ ಪ್ರಮಾಣಪತ್ರ ಪಡೆಯಲು ಅವಕಾಶವಿರುತ್ತದೆ. |

**ಸಂಖ್ಯೆ: ಇಡಿ 27 ಯುಎನ್‌ಇ 2023**

**(ಡಾ: ಅಶ್ವಥ್ ನಾರಾಯಣ ಸಿ.ಎನ್.)**
ಉನ್ನತ ಶಿಕ್ಷಣ, ಐಟಿ - ಬಿಟಿ, ವಿಜ್ಞಾನ
ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಮತ್ತು ಕೌಶಲ್ಯಾಭಿವೃದ್ಧಿ,
ಜೀವನೋಪಾಯ ಹಾಗೂ ಉದ್ಯಮಶೀಲತೆ ಸಚಿವರು.